# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/198/11-12

ದಿನಾಂಕ :30.08.2016

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಯು.ಆರ್.ನಾಗರಾಜ ತಂದೆ ಯು.ರಾಮಪ್ಪ, ಹೆರಕಲ್ಲು ಗ್ರಾಮ, ಸಿರುಗುಪ್ಪ ತಾಲ್ಲೂಕು<br><br>(ಶ್ರೀಯು.ಬಸವರಾಜ, ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಸಿರುಗುಪ್ಪ<br>2. ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ<br>3. ಗ್ರಾಮಲೆಕ್ಕಾಧಿಕಾರಿಗಳು, ಹೆರಕಲ್ಲು<br>4.ಶ್ರೀ ಎಂ.ದೊಡ್ಡಯ್ಯಸ್ವಾಮಿ ತಂದೆ ಸಿದ್ದಯ್ಯ, ಹೆರಕಲ್ಲುಗ್ರಾಮ,ಸಿರುಗುಪ್ಪ ತಾಲೂಕು<br>(ಶ್ರೀಜಿ.ನೀಲನಗೌಡ, ವಕೀಲರು, ಬಳ್ಳಾರಿ) |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಹೆರಕಲ್ಲು | 164ಎ | 1.61 |
| | | 164ಬಿ/2 | 1.74 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ ಇವರ ಎಂ.ಆರ್.ನಂ.35/1993-94, ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 13.09.2011, 27.12.2012, 04.09.2013, 17.12.2013, 17.01.2014, 24.07.2014, 05.05.2015, 21.07.2015, 01.09.2015, 03.11.2015, 29.03.2016,30.08.2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ಹೆರಕಲ್ಲು ಗ್ರಾಮದ ಸ.ನಂ. 164ಎ,164ಬಿ/2 ವಿಸ್ತೀರ್ಣ:1.61, 1.74, ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ ಆದೇಶ ಎಂ.ಆರ್.ನಂ.35/ 1993-94 ರ ಹಕ್ಕು ಬದಲಾವಣೆ ಗೈರು ಮಂಜೂರು ಆದೇಶವನ್ನು ಪ್ರಶ್ನಿಸುತ್ತಾ ,ಸದರಿ ಗೈರು ಮಂಜೂರು ಆದೇಶವನ್ನು ರದ್ದು ಪಡಿಸಿ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಸದರಿ ಮೇಲ್ಮನವಿಯಲ್ಲಿ ವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ,22.10.2002ರ ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರ ಆದೇಶದಂತೆ ಪ್ರಶ್ನಿತ ಆಸ್ತಿಯ ಕುರಿತು ಈ ನ್ಯಾಯಾಲಯದಲ್ಲಿ ವಿಚಾರಣೆನಡೆದು ದಿನಾಂಕ:21.08.2004 ರಲ್ಲಿ ಆದೇಶವಾಗಿದ್ದು,ಸದರಿ ಆದೇಶದಲ್ಲಿ ಪ್ರಶ್ನಿತ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ ಆದೇಶ ಎಂ.ಆರ್.ನಂ.35/ 1993-94 ಎತ್ತಿಹಿಡಿಯಲಾಗಿರುತ್ತದೆ. ಪುನಃ ಸದರಿ ಎಂ.ಆರ್.ನಂ.35/ 1993-94 ನ್ನು ಪ್ರಶ್ನಿಸಿ ಇದೇ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುವುದು ಕಾನೂನು ಸಮ್ಮತವಾಗಿರುವುದಿಲ್ಲ.

ಮೇಲ್ಮನವಿದಾರರು ದಿನಾಂಕ:21.08.2004 ರ ಈ ನ್ಯಾಯಾಲಯದ ಆದೇಶದಿಂದ ಭಾದಿತರಾಗಿದ್ದಲ್ಲಿ ಸೂಕ್ತ ಪ್ರಾಧಿಕಾರದಲ್ಲಿ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಬೇಕಾಗಿರುವುದರಿಂದ. ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ ಆದೇಶಿಸುವ ಈ ಕೆಳಕಂಡಂತೆ ಆದೇಶ.

**:: ಆದೇಶ ::**

**ವಾದಿಯ ಮೇಲ್ಮನವಿಯನ್ನು ವಜಾಗೊಳಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ.ಸಿರುಗುಪ್ಪ ತಾಲ್ಲೂಕಿನ ಹೆರಕಲ್ಲು ಗ್ರಾಮದ ಸ.ನಂ 164ಎ,164ಬಿ/2 ವಿಸ್ತೀರ್ಣ:1.61, 1.74, ಎಕರೆ ಜಮೀನಿಗೆ ಸಂಬಂಧಿಸಿದಂತೆ .ವಾದಿಯ ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ:30-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,

ಬಳ್ಳಾರಿ